## ನಿಜ ನಾಡೋಜ

ಮೃದು ಮಧ್ಯಮ ತನು ಹಿತಮಿತ
ಮೃದುವಚನಂಲಲಿತಮಧುರಸುಂದರವೇಷಂ'

ಇದರ ಮೊದಲ ಸಾಲಿನಲ್ಲಿರುವ 'ಕದಳೀ ಗರ್ಭಶ್ಯಾಮಂ' ಎಂಬ ಬಗ್ಗೆಯೇ ಕನ್ನಡದಲ್ಲಿ ಭಾರೀ ಚರ್ಚೆ ನಡೆದಿದೆ. ಕೆಲವರ ಪ್ರಕಾರ ಅವನದು ಬಾಳೆದಿಂಡಿನ ಒಳಗೆ ಕಾಣುವ ನಸುಗಪ್ಪು ಅಥವಾ ಎಣ್ಣೆಗಪ್ಪು ಬಣ್ಣ. ಮತ್ತೆ ಕೆಲವರ ಪ್ರಕಾರ ಬಾಳೆಯ ಹೂವಿನ (ಪೂಂಬೆ) ಕೆಂಪು ಮಿಶ್ರಿತ ಕಪ್ಪು ಬಣ್ಣ. ಚರ್ಚೆಗಳು ಏನೇ ಇರಲಿ, ಈ ಕುರಿತು ತೀ.ನಂ. ಶ್ರೀಕಂಠಯ್ಯನವರು ಹೇಳಿದ್ದನ್ನು ಒಪ್ಪಿಕೊಳ್ಳಲು ಸದ್ಯಕ್ಕೆ ಏನೂ ಅಡ್ಡಿಯಿಲ್ಲ. ಅವರ ಪ್ರಕಾರ 'ಪಂಪನದು ಕನ್ನಡಿಗರಿಗೆ ಸಹಜವಾದ ನಸುಗಪ್ಪುಬಣ್ಣ'.

ಮುಂದೆ ಪಂಪ ತನ್ನದು ಗುಂಗುರು ಕೂದಲು, ಉರುಟು ಮುಖ, ಮಧ್ಯಮ ಗಾತ್ರದ ದೇಹ, ಹಿತಮಿತವಾಗಿ ಮಾತಾಡುವವನು ಎಂದೆಲ್ಲಾ ಬರೆದುಕೊಂಡು, ಕೊನೆಗೆ 'ತಾನು ಸುಂದರನೇ ಹೌದು' ಎಂದೂ ಹೇಳಿಕೊಳ್ಳಲು ಸಂಕೋಚಪಡುವುದಿಲ್ಲ. ಇಷ್ಟಾದಮೇಲೆ ಆತ ರಸಿಕನೇ ಇರಬೇಕು. ಕೇರಳ, ಮಲಯ ಮತ್ತು ಆಂಧ್ರದ ಯುವತಿಯರು ಅವನಿಗೆ ಮರುಳಾಗಿದ್ದರಂತೆ. ಇದಕ್ಕೆಲ್ಲ ಕಿರೀಟ ಪ್ರಾಯವಾಗುವಂತೆ ಪಂಪ 'ಅನಂಗಜಂಗಮ ಲತಾಲಲಿತಾಂಗಿಯರಿಂದಮಲ್ತೇ ಸಂಸಾರ ಸಾರೋದಯಂ' ಎಂದು ಘೋಷಿಸಿಬಿಡುತ್ತಾನೆ. ಇನ್ನೊಂದೆಡೆ ಅವನು 'ಧರ್ಮವು ಎಲ್ಲಕ್ಕೂ ಪ್ರಧಾನ, ಅದರ ಫಲವೇ ಸಂಪತ್ತು, ಆ ಫಲದ ರಸ ಅಥವಾ ಸಾರವೇ ಕಾಮ' ಎಂದೂ ಹೇಳುತ್ತಾನೆ.

ಪಂಪನನ್ನು ಸುಮ್ಮನೆ 'ನಾಡೋಜ' ಎಂದು ಕನ್ನಡಿಗರು ಕರೆದಿಲ್ಲ. ಆತ ಕನ್ನಡ ಕಾವ್ಯ ಮಾರ್ಗಕ್ಕೆ ಗುರುವಿನಂತೆ ನಿಂತು ಹಲವು ಹಾದಿಗಳನ್ನು ತೋರಿಸಿದ. ಅದರಲ್ಲಿ ಮುಖ್ಯವಾದದ್ದೆಂದರೆ ದೇಸೀ (ಕನ್ನಡ ಪರಂಪರೆ) ಮತ್ತು ಮಾರ್ಗ (ಸಂಸ್ಕೃತ ಪರಂಪರೆ) ಎಂಬೆರಡು ಹಾದಿಗಳನ್ನು ಹದವಾಗಿ ಜೋಡಿಸಿದ್ದು, ಆಶ್ರಯದಾತನನ್ನು ಕಥಾನಾಯಕನೊಂದಿಗೆ ಸಮೀಕರಿಸಿದ್ದು, ಕಾವ್ಯದಲ್ಲಿ ಲೌಕಿಕ ಮತ್ತು ಆಗಮಿಕ ಎಂಬೆರಡು ಪ್ರಭೇದಗಳನ್ನು ನಿರ್ಮಿಸಿಕೊಂಡು ಎರಡರಲ್ಲೂ ಸೃಜನಶೀಲತೆಯನ್ನು ಮೆರೆದದ್ದು, ಮತ್ತು ಗದ್ಯ ಪದ್ಯ ಮಿಶ್ರಿತವಾದ ಚಂಪೂ ಪ್ರಕಾರವನ್ನು ಕನ್ನಡಕ್ಕೆ ಕೊಟ್ಟದ್ದು. ಪಂಪನ ಚಂಪೂ ಶೈಲಿಗೆ ಸಂಸ್ಕೃತ ಕವಿಗಳೂ ಮನಸೋತಿದ್ದರಂತೆ!

ಭಾಷೆ ಮತ್ತು ನಾಡಿನಮೇಲೆ ಪಂಪನಿಗೆ ಇರುವ ಪ್ರೀತಿ ಅಸಾಧಾರಣವಾದುದು. ತನ್ನದು 'ಪುಲಿಗೆರೆಯ ತಿರುಳ್ಗನ್ನಡ' ಎಂದು ಹೇಳಿದ ಅವನು ವಿಕ್ರಮಾರ್ಜುನ ವಿಜಯದಲ್ಲಿ ಬನವಾಸಿಯ ವರ್ಣನೆ ಮಾಡಿ ಎಲ್ಲ ಕನ್ನಡಿಗರ ಮನಸೂರೆಗೊಂಡ. ಬನವಾಸಿಯಲ್ಲಿ ಓಡಾಡಿದರೆ ನಿಮಗೆ ಕಾಣುವುದು 'ಫಲ ಬಿಟ್ಟ ಮಾವಿನ ಮರ, ದಟ್ಟವಾದ ವೀಳ್ಯದೆಲೆ ಬಳ್ಳಿಗಳು, ಹೂಬಿಟ್ಟ ಸಂಪಿಗೆಯ ಮರ, ಕೂಗುವ ಕೋಗಿಲೆ, ಹಾಡುವ ದುಂಬಿ, ಪ್ರೇಮಿಗಳ ನಗುಮುಖ ಇತ್ಯಾದಿಗಳಾದುದರಿಂದ ಅದು ನಂದನವನವೇ ಸರಿ'. 'ಇಂಥದ್ದೊಂದು ಸ್ಥಳದಲ್ಲಿ ಮನುಷ್ಯರಾಗಿ ಹುಟ್ಟಲೇಬೇಕು, ಒಂದು ವೇಳೆ ಅದಾಗದಿದ್ದರೆ ಮರಿದುಂಬಿಯಾಗಿಯೋ ಕೋಗಿಲೆಯಾಗಿಯೋ ಹುಟ್ಟಬೇಕು'ಎಂಬುದು ಅವನ ಆಸೆ. ಜೊತೆಗೆ ತೆಂಕಣ ಗಾಳಿ ಮೈಸೋಕಿದರೆ, ಒಳ್ಳೆಯ ಮಾತು ಕಿವಿಗೆ ಬಿದ್ದರೆ, ಇಂಪಾದ ಹಾಡು ತೇಲಿಬಂದರೆ, ತುಂಬಿಗಳು ಝೇಂಕರಿಸಿದರೆ, ಅರಳಿದ ಮಲ್ಲಿಗೆ ಕಂಡರೆ, ಅವನಿಗೆ ಬನವಾಸಿಯ ನೆನಪಾಗುತ್ತಿತ್ತಂತೆ.

### ಆದಿಪುರಾಣ

ಪಂಪನ ಎರಡು ಕೃತಿಗಳಲ್ಲಿ ಸಹಜವಾಗಿ ವಿಕ್ರಮಾರ್ಜುನ ವಿಜಯವೇ ಹೆಚ್ಚಿನ ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಅದು ಮಹಾಭಾರತದ ಬಗೆಗಣ ಜನರ ಒಲವಿನ ಸಂಕೇತ. ಆದರೆ, ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ ನೋಡಿದರೆ, 16 ಆಶ್ವಾಸಗಳು ಮತ್ತು 1555 ಪದ್ಯಗಳಿರುವ ಆದಿಪುರಾಣದ ಮಹತ್ವ ಕಡಿಮೆಯೇನೂ ಅಲ್ಲ. ಈ ಕಾವ್ಯವು ಮೊದಲನೆಯ ತೀರ್ಥಂಕರನಾದ ಪುರುದೇವ ಅಥವಾ ವೃಷಭದೇವನ ಸುತ್ತ ಹೆಣೆದುಕೊಂಡಿದೆ. ಜಿನಸೇನಾಚಾರ್ಯರ ಸಂಸ್ಕೃತ ಕಾವ್ಯ ಪೂರ್ವಪುರಾಣ ಇದರ ಆಕರ ಗ್ರಂಥ. 'ಭೋಗದ ಕೊನೆ ತ್ಯಾಗ, ವೈಭವದ ಕೊನೆ ವೈರಾಗ್ಯ' ಎಂಬ ಜೈನ ತತ್ವವನ್ನು ಈ ಕೃತಿಯು ಅನೇಕ ಘಟನೆಗಳ ಮೂಲಕ ಪ್ರತೀತಗೊಳಿಸುತ್ತದೆ. ಈ